## ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/203/ಇ-ಆಡಳಿತ/ಸಾಮಾನ್ಯ/2012-13

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ: 14-05-2013.

### ಸುತ್ತೋಲೆ

ವಿಷಯ: ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳಲ್ಲಿ "ಇನ್ನೊವೇಟಿವ್ ಕ್ಲಬ್" ಗಳನ್ನು ಸ್ಥಾಪಿಸುವ ಕುರಿತು..

*****

ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ದಿ: 29-4-2013 ರಂದು ಜರುಗಿದ ಸಭೆಯಲ್ಲಿ ಈ ಕೆಳಗಿನಂತೆ ತೀರ್ಮಾನಿಸಲಾಗಿದೆ.

ಸೃಷ್ಟಿ (SRISTI) ಎಂಬ ಸಂಸ್ಥೆಯ **www.techpedia.in** ಎನ್ನುವ ಅಂತರ್ಜಾಲ ತಾಣದ ಮುಖಾಂತರ ಸೂಕ್ಷ್ಮ, ಸಣ್ಣ, ಮಧ್ಯಮ ಕೈಗಾರಿಕೆಗಳ ಮತ್ತು ಅಸಂಪ್ರದಾಯಿಕ ಹಾಗೂ ಸಾಮಾಜಿಕ ವಲಯಗಳಲ್ಲಿ ಎದುರಿಸಲಾಗುವ ತಾಂತ್ರಿಕ ಸಮಸ್ಯೆಗಳಿಗೆ ಹೊಸತನ/ಕ್ರಿಯಾಶೀಲತೆಯಿಂದ ಕೂಡಿದ ಪರಿಹಾರಗಳನ್ನು ಕಂಡು ಹಿಡಿಯುವ ನಿಟ್ಟಿನಲ್ಲಿ ಅಂತಿಮ ವರ್ಷದ ಪಾಲಿಟೆಕ್ನಿಕ್ ವಿದ್ಯಾರ್ಥಿಗಳು ಸದರಿ ಸಮಸ್ಯೆಗಳನ್ನು ತಮ್ಮ ಪ್ರೊಜೆಕ್ಟ್ ವರ್ಕ್‌ಗಳಲ್ಲಿ ಅಳವಡಿಸಿಕೊಳ್ಳಲು ಸಹಕಾರಿಯಾಗುವಂತೆ "Innovative Club" ಅನ್ನು ಸಂಸ್ಥೆಯ ಹಂತದಲ್ಲಿ ಈ ಕೆಳಗಿನ ಮಾರ್ಗ ಸೂಚಿಗಳನ್ವಯ ದಿ: 16-5-2013 ರೊಳಗಾಗಿ ಸ್ಥಾಪಿಸಲು ಈ ಕೂಡಲೇ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

i. ಪ್ರಾಂಶುಪಾಲರನ್ನೊಳಗೊಂಡಂತೆ ಸಂಸ್ಥೆಯಲ್ಲಿ ಇರುವ ಎಲ್ಲಾ ವಿಭಾಗಳಿಂದ ಒಬ್ಬ ವಿದ್ಯಾರ್ಥಿ ಹಾಗೂ ಉಪನ್ಯಾಸಕರನ್ನೊಳಗೊಂಡ ಸಮಿತಿ ರಚಿಸುವುದು.

ii. ಸ್ಥಳೀಯವಾಗಿ ಲಭ್ಯವಿರುವ ಕೈಗಾರಿಕಾ ವಲಯದಿಂದ ಒಬ್ಬ ಕೈಗಾರಿಕೋದ್ಯಮಿಯನ್ನು ಸದರಿ ಸಮಿತಿಯ ಸದಸ್ಯರನ್ನಾಗಿ ಪ್ರಾಂಶುಪಾಲರು ನೇಮಕ ಮಾಡುವುದು.

iii. ಪ್ರತಿ ತಿಂಗಳಿಗೊಮ್ಮೆ ಸದರಿ ಸಮಿತಿಯು ಸಭೆ ಸೇರಿ **www.techpedia.in** ಎಂಬ ಅಂತರ್ಜಾಲ ತಾಣದಲ್ಲಿ ವಿವಿಧ ತಾಂತ್ರಿಕ ಕೋರ್ಸುಗಳ ವಿದ್ಯಾರ್ಥಿಗಳಿಗೆ ಬೇಕಾಗುವ ಸಮಸ್ಯೆಗಳನ್ನು ಸದರಿ ಅಂತರ್ಜಾಲದಿಂದ ಪಡೆದು ವಿದ್ಯಾರ್ಥಿಗಳಿಗೆ ನೀಡಿ ಪ್ರೋಜೆಕ್ಟ್ ಮೂಲಕ ಅವುಗಳಿಗೆ ಪರಿಹಾರ ಕಂಡು ಹಿಡಿಯಲು ಸಹಕರಿಸುವುದು.

iv. ಯಶಸ್ವಿಯಾದ ಪ್ರೋಜೆಕ್ಟ್‌ಗಳ ವರದಿಗಳನ್ನು **www.techpedia.in** ಎಂಬ ಅಂತರ್ಜಾಲ ತಾಣದಲ್ಲಿ ಅಳವಡಿಸುವುದು (Upload ಮಾಡುವುದು).

v. ಪ್ರತಿ ಕೋರ್ಸುಗಳಿಗೆ ಸಂಬಂಧಿಸಿದಂತೆ ಎರಡು ಉತ್ತಮವಾದ ಪ್ರೊಜೆಕ್ಟ್ ವರದಿಗಳನ್ನು ಆಯ್ಕೆ ಮಾಡಿ ನಿರ್ದೇಶನಾಲಯಕ್ಕೆ ಪ್ರತಿ ವರ್ಷ ಮೇ ಮಾಹೆಯೊಳಗಾಗಿ ಸಲ್ಲಿಸುವುದು.

ನಿರ್ದೇಶಕರು
ತಾಂತ್ರಿಕ ಶಿಕ್ಷಣ ನಿದೇಶನಾಲಯ.

ಗೆ,

1. ಖಾಸಗಿ, ಅನುದಾನಿತ ಹಾಗೂ ಸರ್ಕಾರಿ ಪಾಲಿಟೆಕ್ನಿಕ್‌ಗಳ ಎಲ್ಲಾ ಪ್ರಾಂಶುಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ.
2. ಜಂಟಿ ನಿರ್ದೇಶಕರು, ಸಿಡಿಸಿ ವಿಭಾಗ, ಇವರ ಮಾಹಿತಿಗಾಗಿ.
3. ನಿರ್ದೇಶಕರ ಆಪ್ತ ಶಾಖೆಗೆ.

Rk(sh)

## ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/203/ಇ-ಆಡಳಿತ/ಸಾಮಾನ್ಯ/2012-13

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ: 14-05-2013.

**ಸುತ್ತೋಲೆ**

ವಿಷಯ: ಅಂತಿಮ ವರ್ಷದ ಡಿಪ್ಲೊಮಾ ವಿದ್ಯಾರ್ಥಿಗಳು ತಯಾರಿಸಿದ ಪ್ರೋಜೆಕ್ಟ್ ವರದಿಗಳ ಡಾಟಾ ಬೇಸನ್ನು ತಯಾರಿಸುವ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಸಂಸ್ಥೆಯ ಎಲ್ಲಾ ವಿಭಾಗಗಳ ಈ ಸಾಲಿನ ಅಂತಿಮ ವರ್ಷದ ವಿದ್ಯಾರ್ಥಿಗಳು ಯಶಸ್ವಿಯಾಗಿ ಪೂರೈಸಿ ಸಲ್ಲಿಸಿರುವ ಪ್ರೋಜೆಕ್ಟ್ ವರದಿಗಳ ಡಾಟಾಬೇಸ್ ತಯಾರಿಸುವ ಸಂಬಂಧ ಸದರಿ ವರದಿಗಳ ಸಾಫ್ಟ್ ಕಾಪಿಗಳನ್ನು dtekaregov@gmail.com ವಿಳಾಸಕ್ಕೆ ದಿ: 25-5-2013 ರೊಳಗೆ ಕಳುಹಿಸಿಕೊಡಲು ಈ ಮೂಲಕ ಸೂಚಿಸಲಾಗಿದೆ.

**ನಿರ್ದೇಶಕರು**
**ತಾಂತ್ರಿಕ ಶಿಕ್ಷಣ ನಿದೇಶನಾಲಯ.**

ಗೆ,

1. ಖಾಸಗಿ, ಅನುದಾನಿತ ಹಾಗೂ ಸರ್ಕಾರಿ ಪಾಲಿಟೆಕ್ನಿಕ್‌ಗಳ ಎಲ್ಲಾ ಪ್ರಾಂಶುಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ.
2. ಜಂಟಿ ನಿರ್ದೇಶಕರು, ಸಿಡಿಸಿ ವಿಭಾಗ, ಇವರ ಮಾಹಿತಿಗಾಗಿ.
3. ನಿರ್ದೇಶಕರ ಆಪ್ತ ಶಾಖೆಗೆ.

Rk(sh)